# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಶೃಂಗೇರಿಯ ಶ್ರೀ ಶಾರದಾ ಪೀಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಶೃಂಗೇರಿ ಮಠದ ಪೂಜ್ಯ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಆಶೀರ್ವಾದ ಪಡೆದರು.


ಸಂಪುಟ : 45 | ಸಂಚಿಕೆ : 12 | ಭಾದ್ರಪದ–ಆಶ್ವಯುಜ | ಕಲಿಯುಗಾಬ್ದ 5125 | 15–10–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ನೇತೃತ್ವದಲ್ಲಿ ಮಾತೃಶಕ್ತಿ – ರಾಜಕೀಯ ಕ್ಷೇತ್ರಕ್ಕೊಂದು ಹೊಸ ಆಯಾಮ

ಇತ್ತೀಚೆಗೆ ಭಾರತದ ನೂತನ ಸಂಸತ್ತಿನಲ್ಲಿ ಮೊದಲ ವಿಧೇಯಕವಾಗಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ಕುರಿತು ಮಸೂದೆ ಮಂಡನೆಯಾಯಿತು. ಇದಕ್ಕೆ ಪ್ರತಿಪಕ್ಷಗಳೂ ಸೇರಿದಂತೆ ಅನೇಕರ ಭಿನ್ನಾಭಿಪ್ರಾಯದ ನಡುವೆಯೂ ಸಹಮತಿ ಸಿಕ್ಕಿದ್ದು ವಿಶೇಷ. ಅದರಲ್ಲೂ ಈ ನಿಟ್ಟಿನಲ್ಲಿ ಅನೇಕ ವರ್ಷಗಳಿಂದ ಪ್ರಯತ್ನಗಳು ನಡೆದಿದ್ದರೂ ಕೂಡ ಯಾವುದೇ ಗಮನಾರ್ಹ ಹೆಜ್ಜೆಗಳನ್ನು ಇಡುವಲ್ಲಿ ರಾಜಕೀಯ ಪಕ್ಷಗಳ ಒಳಗೇ ಒಡಕಿತ್ತು. ಆದರೆ, ಕೊನೆಗೂ ಸಂಸತ್ ಇದಕ್ಕೆ ಒಪ್ಪಿಗೆ ನೀಡಿದ್ದು ಅತ್ಯಂತ ಪ್ರಶಂಸನೀಯವಾದ ನಡೆಯೆಂದರೆ ತಪ್ಪಾಗಲಿಕ್ಕಿಲ್ಲ.

ಒಂದೊಮ್ಮೆ ಸ್ವಾತಂತ್ರ್ಯ ಪೂರ್ವದಲ್ಲಿ ಮೇಡಂ ಭೀಕಾಜಿ ಕಾಮಾ ಅವರು ಸಂಸತ್ತಿನಲ್ಲಿ ಮಾತನಾಡುವಾಗ, ಬರೀ ಪುರುಷರೇ ತುಂಬಿದ್ದ ಸಂಸತ್ತನ್ನು ನೋಡಿ ಮೇಡಂ ಕಾಮಾ ಅವರು, “ಇಲ್ಲಿನ ಸಂಸತ್ತು ನೋಡಿದಾಗ ಒಂದೇ ರೆಕ್ಕೆಯಲ್ಲಿ ಹಾರುವ ಹಕ್ಕಿಯಂತೆ ಕಾಣುತ್ತಿದೆ, ಇಲ್ಲಿ ಬರೀ ಅರ್ಧ ಸಮಾಜದ ಪ್ರತಿನಿಧಿಗಳು ಮಾತ್ರ ನನಗೆ ಕಾಣುತ್ತಿದ್ದಾರೆ. ನಿಮ್ಮ ದೇಶದ ಮಹಿಳೆಯರು ಎಲ್ಲಿ?” ಎಂದು ಪ್ರಶ್ನೆ ಮಾಡಿದ್ದರು. 20ನೇಯ ಶತಮಾನದ ಆದಿಯಲ್ಲಿ ಪ್ರಶ್ನೆ ಮಾಡಿದ್ದ ಮೇಡಂ ಕಾಮಾ ಅವರ ಪ್ರಶ್ನೆ ಇವತ್ತಿಗೂ ದೇಶದ ಸಂಸತ್ತಿನ ಚಿತ್ರ ನೋಡುವಾಗ ಕಣ್ಮುಂದೆ ಬರದಿರದು.

ಜಾಗತಿಕವಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಅತ್ಯಂತ ದೊಡ್ಡದಾದರೂ ಅವರ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆಯ ಗಾತ್ರ ಬಹಳ ಸಣ್ಣದಾಗಿದೆ. ಜಗತ್ತಿನ ಅತ್ಯಂತ ಮುಂದುವರೆದ ದೇಶವಾದ ಅಮೇರಿಕಾ ಸ್ವಾತಂತ್ರ್ಯ ಪಡೆದುಕೊಂಡು ದಶಕಗಳು ಕಳೆದರೂ ಕೂಡ 1920ರ ತನಕವೂ ಮಹಿಳೆಯರಿಗೆ ಮತದಾನದ ಹಕ್ಕು ನೀಡಿರಲಿಲ್ಲ. ಹೀಗಿರುವಾಗ ಭಾರತವು ತಾನು ಸ್ವಾತಂತ್ರ್ಯಗೊಂಡ ನಂತರ ಅಳವಡಿಸಿಕೊಂಡ ಸಂವಿಧಾನದಲ್ಲಿ ಮಹಿಳೆ ಮತ್ತು ಪುರುಷ ಎನ್ನುವ ಯಾವ ಬೇಧವೂ ಇಲ್ಲದೆ ಸಾರ್ವತ್ರಿಕವಾಗಿ ಮತದಾನದ ಹಕ್ಕು ನೀಡಿತು. ಅಲ್ಲದೆ ಮೊದಲ ಮಂತ್ರಿ ಮಂಡಲದಲ್ಲೂ ಮಹಿಳೆಯರ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಟ್ಟಿದ್ದನ್ನು ನಾವು ಕಾಣಬಹುದು.

ಭಾರತಕ್ಕೆ ಪುರುಷ ಪ್ರಧಾನ ಸಮಾಜದ ಪಟ್ಟವು ಕಾಲಾಂತರದಲ್ಲಿ ಸಿಕ್ಕಿದೆಯಾದರೂ, ಮಹಿಳಾ ಚಿಂತನೆಗಳು ಬಹುತೇಕ ಕ್ಷೇತ್ರಗಳಲ್ಲಿ ಅತ್ಯಂತ ಹಾಸುಹೊಕ್ಕಾಗಿರುವುದನ್ನು ನಾವು ಕಾಣಬಹುದು. ಇನ್ನು ಅನೇಕ ಪ್ರಾಂತಗಳಲ್ಲಿ ಮಾತೃ ಪ್ರಧಾನ ವ್ಯವಸ್ಥೆಗಳನ್ನು ಹೊಂದಿರುವುದನ್ನೂ ಕಾಣಬಹುದಾಗಿದೆ. ಹೀಗಾಗಿ ಮಹಿಳಾ ಸಮನ್ವಯದ ವಿಚಾರದಲ್ಲಿ ಭಾರತೀಯ ಚಿಂತನೆಗಳ ಪ್ರಸ್ತುತತೆ ಈ ಕಾಲದ ಅತ್ಯಂತ ಗಂಭೀರವಾದ ಅಗತ್ಯವಾಗಿದೆ.  ಮಹಿಳಾ ದೃಷ್ಟಿಕೋನದ ಒಳಗೊಳ್ಳುವಿಕೆಗೆ ಆರಕ್ಷಣವು ಸಾಮಾಜಿಕವಾಗಿ ವ್ಯಾಪಕವಾಗಿ ಒಪ್ಪಿತವಲ್ಲದಿದ್ದರೂ, ಭಾರತೀಯ ಮಹಿಳಾ ದೃಷ್ಟಿಕೋನವಿಲ್ಲದಿರುವುದರ ಪರಿಣಾಮ ಸ್ವರೂಪಗಳನ್ನು ನಾವು ವ್ಯವಸ್ಥೆಯೊಳಗೆ ಗುರುತಿಸಬಹುದಾಗಿದೆ. ಅದನ್ನು ಸರಿ ಪಡಿಸಿಕೊಂಡು ರಾಷ್ಟ್ರೀಯ ಏಳ್ಗೆಗೆ ದುಡಿಯಬೇಕಾದಾಗ ಈ ಅಂಶಗಳನ್ನು ಒಳಗೊಳ್ಳುವುದು ಅನಿವಾರ್ಯವೂ ಆಗಿದೆ.

ಇನ್ನು ಇತ್ತೀಚೆಗಂತೂ ಮಹಿಳಾ ಸಮನ್ವಯದ ಕುರಿತಾಗಿ ನಡೆಯಬೇಕಾದ ಕಾರ್ಯಗಳ ಬಗೆಗೆ ಸಮಾಜವು ಯುಗಾನುಕೂಲವಾಗಿ ಚಿಂತನೆ ನಡೆಸಲು ಪ್ರತಿಬದ್ಧವಾಗಿರುವುದನ್ನು ನಾವು ಕಾಣಬಹುದು. ಇದರಲ್ಲಿ ಅನೇಕ ಅಪವಾದಗಳಿದ್ದರೂ ಭಾರತೀಯ ಸಾಮಾಜಿಕ ವ್ಯವಸ್ಥೆಯಾದ ಕುಟುಂಬಗಳಲ್ಲಿ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಆರ್ಥಿಕ ಒತ್ತಡ, ಸಾಮಾಜಿಕ ಜವಾಬ್ದಾರಿ, ಶಿಕ್ಷಣ ಮತ್ತು ಆರೋಗ್ಯದ ಸಲುವಾಗಿ ಮನೆಯ ಹೊರಗೂ ಕೆಲಸ ಮಾಡುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರಿಂದ ಅನೇಕ ಮೂಲಭೂತ ಸಾಂಸ್ಥಿಕ ಬದಲಾವಣೆಯ ಚಿಂತನೆಗಳು ಕುಟುಂಬಗಳಲ್ಲೂ ಹೆಚ್ಚಾಗಿದೆ. ಹೀಗಾಗಿ ಹೆಚ್ಚುತ್ತಿರುವ ಈ ಬದಲಾವಣೆಗಳಿಗೆ ಹೊಂದಿಕೊಂಡಂತೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಹೆಣ್ಣುಮಕ್ಕಳ ದೃಷ್ಟಿಕೋನ, ಚಿಂತನೆ ಮತ್ತು ರಾಷ್ಟ್ರೀಯ ಪುನರ್ನಿರ್ಮಾಣದಲ್ಲಿ ಅವರ ಯೋಗದಾನವನ್ನೂ ಸೇರಿಸಿಕೊಂಡಂತೆ ನೋಡಿದಾಗ ರಾಜಕೀಯವಾಗಿಯೂ ಮಹಿಳೆಯರು ಸಬಲವಾಗಿ ಬೆಳೆಯುವುದು ಮತ್ತು ಸಮಾಜದಲ್ಲಿ ದೃಢ ನಿರ್ಧಾರವನ್ನು ತೆಗೆದುಕೊಂಡು ಮುನ್ನಡೆಸುವ ಡಿಸಿಶನ್ ಮೇಕಿಂಗ್ ಸ್ಥಾನದಲ್ಲಿಯೂ ಅವರನ್ನು ಒಳಗೊಳ್ಳುವುದು ಸಾಮಾಜಿಕವಾಗಿ ಅತ್ಯಂತ ಮುಖ್ಯವಾದ ಅಂಶವೂ ಹೌದು.



ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಈಗಾಗಲೇ ಮೀಸಲಾತಿ ನೀಡಲಾಗಿದೆಯಾದರೂ ವಿಧಾನಸಭೆ ಮತ್ತು ಲೋಕಸಭೆಗಳಂತಹ ಮಹತ್ವದ ಪ್ರಾತಿನಿಧಿತ್ವ ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು ಚುನಾಯಿತರಾಗುವ ನಿಟ್ಟಿನಲ್ಲಿ ಸಹಾಯಕವಾಗೇನೂ ಇಲ್ಲ. ಅಲ್ಲದೆ ರಾಜಕೀಯ ಪಕ್ಷಗಳ ಗುರಿ ಮಹಿಳಾ ಮತದಾರರಾದರೂ ಮಹಿಳೆಯರ ಪ್ರಾತಿನಿಧಿತ್ವ ನೇತೃತ್ವ ಎರಡನ್ನೂ ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳುವ, ಅದನ್ನು ಸ್ವಯಂ ಪ್ರೇರಿತರಾಗಿ ಜಾರಿಗೆ ತರುವ ಯಾವ ಆಸಕ್ತಿಯೂ ಇದ್ದಂತಿಲ್ಲ.

ಆದರೆ ಲೋಕಸಭೆಯಲ್ಲಿ, ವಿಧಾನಸಭೆಗಳಲ್ಲಿ ಈವರೆಗೂ ಸದಸ್ಯರಾಗಿದ್ದ ಅನೇಕರು ಗಾಢವಾಗಿ ತಮ್ಮ ಛಾಪು ಮೂಡಿಸಿರುವುದನ್ನು ನಾವು ಕಾಣಬಹುದು. ಸಮಂಜಸವಾದ ವಾದ ಮಂಡನೆ, ವೈಚಾರಿಕವಾದ ನೇತೃತ್ವ, ತಮ್ಮ ಕ್ಷೇತ್ರವಾರು ಕರ್ತೃತ್ವದ ನಿಷ್ಠೆ ಈ ಬಗೆಗೆ ಮಹಿಳೆಯರ ಸಾಧನೆ ಅಪೂರ್ವಾದುದು. ಆದರೆ ಮಹಿಳೆಯರ ಜನಸಂಖ್ಯೆ ಮತ್ತು ಪ್ರಾತಿನಿಧಿತ್ವದ ದೃಷ್ಟಿಯಿಂದ ನೋಡಿದಾಗ ಸಮತೋಲನ ಎಂಬುದು ದೊಡ್ಡ ಮರೀಚಿಕೆಯೇ ಸರಿ. ಅಲ್ಲದೆ ಇಂದಿರಾಗಾಂಧಿ, ಸುಷ್ಮಾ ಸ್ವರಾಜ್, ಸೋನಿಯಾ ಗಾಂಧಿ, ಮಾಯಾವತಿ, ನಿರ್ಮಲಾ ಸೀತಾರಾಮನ್, ಮಮತಾ ಬ್ಯಾನರ್ಜಿ, ಸ್ಮೃತಿ ಇರಾನಿ ಹೀಗೆ ಅನೇಕ ಮಹಿಳೆಯರು ತಮ್ಮ ಸಾಮರ್ಥ್ಯದ ಮೂಲಕ ನಾಯಕತ್ವದ ಹೆಗ್ಗುರುತನ್ನು ಮೂಡಿಸಿದ್ದರೂ ಕೂಡ, ಭಾರತದಲ್ಲಿನ ಮಹಿಳೆಯರ ಜನಸಂಖ್ಯೆಯ ಅನುಪಾತಕ್ಕೆ ಹೋಲಿಸಿದರೆ ಇದು ಬೆರಳೆಣಿಕೆಯಷ್ಟು ಮಾತ್ರ.
ಇನ್ನು ಕೆಳಹಂತದ ಮೀಸಲಾತಿಯಲ್ಲಿ ಈಗಾಗಲೇ ಇರುವ ‘ಸರಪಂಚ್ ಕಾ ಪತಿ’ ಎನ್ನುವ ಕೆಟ್ಟ ಸಂಪ್ರದಾಯವೂ ಕೂಡ ರಾಜಕೀಯವಾಗಿ ಮಹಿಳಾ ಮೀಸಲಾತಿಗೆ ದೊಡ್ಡ ಸವಾಲಾಗಿದೆ. ಅನೇಕ ಬಾರಿ ಗಂಡನ, ಮಾವನ, ತಂದೆಯ ಕ್ಷೇತ್ರದಲ್ಲಿಬಂದ ಮೀಸಲಾತಿಯನ್ನು ಕಳೆದುಕೊಳ್ಳಲಾಗದೆ ತಮ್ಮ ಮನೆಯಲ್ಲಿ ಹೆಂಡತಿಗೆ, ಮಗಳಿಗೆ, ಸೊಸೆಗೆ ಎಂದು ಸೀಟು ಹಂಚಿರಿರುವ ಸಾವಿರಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿರುವುದನ್ನು ನೋಡಬಹುದು. ಆದರೆ ಸಕಾರಾತ್ಮಕ ಕಾರ್ಯಗಳೂ ಗ್ರಾಮೀಣ ಪ್ರದೇಶದಲ್ಲಿ ಸದ್ದಿಲ್ಲದೆ ನಡೆಯುತ್ತಿದೆ. ಉದಾಹರಣೆಗೆ, ಚಿತ್ರದುರ್ಗದ ಮೊಣಕಾಲ್ಮೂರಿನ  ನಾಗಸಮುದ್ರ ಗ್ರಾಮ ಪಂಚಾಯಿತಿಯ ತಿಪ್ಪಮ್ಮ ತಮ್ಮ ಗ್ರಾಮದ ಪಂಚಾಯಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ತಾವು ಶಿಕ್ಷಣ ಪಡೆಯದಿದ್ದರೂ ಕೂಡ ತಮ್ಮ ಗ್ರಾಮದಲ್ಲಿ ಮೊದಲ ಮಹಿಳಾ ಸಂಘ ಸ್ಥಾಪನೆ ಮಾಡಿದ್ದಾರಲ್ಲದೆ. ಸಹಿ ಮಾಡುವುದನ್ನು ಕಲಿತ ಅವರು ಅನೇಕ ಮಹಿಳಾ ಸಶಕ್ತೀಕರಣ ಗುಂಪುಗಳನ್ನು ಕಟ್ಟಿ ವ್ಯಾವಹಾರಿಕವಾಗಿಯೂ ಅದನ್ನು ಯಶಸ್ವಿಗೊಳಿಸಿದ್ದಾರೆ. ಇಂದಿಗೂ ತಮ್ಮ ನೀರುಗಂಟಿ ಪತಿಯೊಂದಿಗೆ ಸಣ್ಣ ಮನೆಯೊಂದರಲ್ಲಿ ವಾಸಿಸುವ ತಿಪ್ಪಮ್ಮನಂತಹ ನೂರಾರು ಉದಾಹರಣೆಗಳನ್ನೂ ನಾವು ಕಾಣಬಹುದು. ಹೀಗಾಗಿ ಮಹಿಳೆಯರಿಗೆ ತಮ್ಮ ಕಾರ್ಯಗಳನ್ನು ನಿರ್ವಹಿಸಲು, ತಮ್ಮ ಚಿಂತನೆಗಳನ್ನು ಅನುಷ್ಠಾನಗೊಳಿಸಲು  ಸ್ವಾತಂತ್ರ್ಯ ನೀಡುತ್ತಾ, ಅವರನ್ನು ಅದಕ್ಕಾಗಿ ಸಶಕ್ತರನ್ನಾಗಿ ಮಾಡುವುದೂ ಕೂಡ ಸಮಾಜವಾಗಿ ನಮ್ಮದೇ ಕರ್ತವ್ಯವಾಗಿದೆ.

ಹೀಗಿರುವಾಗ ರಾಜ್ಯ ಹಾಗು ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಕುರಿತು ಅತ್ಯಂತ ಪಾರದರ್ಶಕವಾದ ಮತ್ತು ಪಕ್ವವಾದ ನೀತಿಯನ್ನು ಹುರಿಗೊಳಿಸುವ, ಮತ್ತು ಅದಕ್ಕೆ ಅನುಗುಣವಾದ ಮನಸ್ಥಿತಿಯನ್ನೂ ನಿರ್ಮಾಣ ಮಾಡುವುದು ಸರಕಾರದ ಹೆಗಲ ಮೇಲಿದೆ. ಅಲ್ಲದೆ ಈಗಾಗಲೇ ಇರುವ ಮೀಸಲಾತಿಯನ್ನೂ ಹಾಗೂ ಅದರ ಪರಿಣಾಮಗಳನ್ನೂ, ವ್ಯವಸ್ಥೆಯಲ್ಲಿ ಅದು ಮೂಡಿಸುತ್ತಿರುವ ಛಾಪನ್ನೂ ಸದೃಢಗೊಳಿಸುವ ಕುರಿತಾಗಿ ಚಿಂತನೆ ನಡೆಸಬೇಕಾಗಿದೆ.


ಅಲ್ಲದೆ ರಾಜಕೀಯ ಪಕ್ಷಗಳೂ ಕೂಡ ನೆಲಮಟ್ಟದಿಂದಲೇ ಮಹಿಳೆಯರ ನೇತೃತ್ವವನ್ನು ಗುರುತಿಸಿ, ಪೋಷಿಸಿ ನೀರೆರೆದು ಬೆಳೆಸುವ ನಿಟ್ಟಿನಲ್ಲಿ ಗಮನ ಹರಿಸಬೇಕಾಗಿದೆ. ಕೇವಲ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೋ ಅಥವಾ ಸಂಸ್ಕೃತಿ ಸಚಿವಾಲಯಕ್ಕೋ ಮಹಿಳೆಯರ ಪ್ರಾತಿನಿಧ್ಯವು ಮಿತಿಗೊಳ್ಳದೆ ಅದರ ಆಚೆಗೂ ಸಾಮರ್ಥ್ಯಪೂರ್ಣವಾಗಿ ಕಾರ್ಯ ನಿರ್ವಹಿಸುವ ಮಹಿಳೆಯರನ್ನು ಗುರುತಿಸಿ ರಾಜಕೀಯವಾಗಿ ತೊಡಗಿಸಿಕೊಳ್ಳುವುದೂ ಅತ್ಯಂತ ಮುಖ್ಯವಾಗಿದೆ.

ಇದೆಲ್ಲದರ ಆಚೆಗೆ ಸ್ವತಃ ಮಹಿಳೆಯರೂ ಕೂಡ ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ವೃತ್ತಿಪರವಾಗಿ ತೊಡಗಿಸಿಕೊಳ್ಳುವುದಲ್ಲದೆ ‘ಮಹಿಳೆ’ ಎಂಬ ಒಂದೇ ಕಾರ್ಡು ಬಳಸುವುದೋ, ಅಥವಾ ಬೇರೆ ಯಾವುದೇ ಅನ್ಯ ಮಾರ್ಗಗಳನ್ನು ಕಂಡುಕೊಳ್ಳುವುದೋ ಮಾಡುವುದು ಅನೇಕ ಬಾರಿ ಸಾಮಾಜಿಕವಾಗಿ ಬೇರೆಯದೇ ಸಂದೇಶ ಕೊಡಬಹುದಾದ ದಟ್ಟ ಸಾಧ್ಯತೆಗಳೂ ಸಂಭವಿಸುತ್ತದೆ. ಅಲ್ಲದೆ ಸಾಮಾಜಿಕವಾಗಿ ಕೊಡಗಿಕೊಳ್ಳುವ ಮಹಿಳೆಯರಿಗೆ ಸಮಾಜವೂ ಅತ್ಯಂತ ಸುರಕ್ಷತವಾದ ಮತ್ತು ಸೂಕ್ತವಾದ ಸ್ಪಂದನವನ್ನು ನೀಡುವುದೂ ಅಗತ್ಯವಾಗಿದೆ.

ಈ ವಿಧೇಯಕವು ಭಾರತೀಯ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲೇ ಸರಿ. ಇದನ್ನು ಸಮರ್ಪಕವಾಗಿ, ಸದುದ್ದೇಶಪೂರ್ವಕವಾಗಿ ಮತ್ತು ರಾಷ್ಟ್ರಕಾರ್ಯಕ್ಕೆ ಅನುಗುಣವಾಗಿ ಬಳಕೆಯಾಗುವಂತೆ ಅದನ್ನು ಅನುಷ್ಠಾನಗೊಳಿಸುವುದು ಮತ್ತು ಪ್ರಜಾಪ್ರಭುತ್ವದ ಸಾರ್ವಭೌಮತೆಯನ್ನೂ ಎತ್ತಿಹಿಡಿಯುವುದು ಸಮಾಜವಾಗಿ ಮತ್ತು ಜವಾಬ್ದಾರಿಯುತ ನಾಗರೀಕರಾಗಿ ನಮ್ಮ ಕರ್ತವ್ಯವಾಗಿದೆ.

## ಸಂಸ್ಮರಣೆ

# ರಾಣಿ ಚೆನ್ನಾಭೈರಾದೇವಿ (1 ಜನವರಿ 1536 – 1 ಜನವರಿ 1606)



ಇಡೀ ಭಾರತದ ರಾಜಮನೆತನಗಳ ಆಳ್ವಿಕೆಯ ಇತಿಹಾಸದಲ್ಲೇ ಸುದೀರ್ಘ 5 ದಶಕಗಳ ಕಾಲ ರಾಜ್ಯಾಭಾರ ಮಾಡಿದ ಮಹಾರಾಣಿಯ ನಿದರ್ಶನ ದೊರೆಯುವುದು ನಮ್ಮ ಕರ್ನಾಟಕದಲ್ಲಿ ಎನ್ನುವುದು ಹೆಮ್ಮೆಯ ಸಂಗತಿ. ಕರ್ನಾಟಕಕ್ಕೆ ಈ ಕೀರ್ತಿಯ ಮಾಲೆಯನ್ನು ತೊಡಿಸಿದ ಮಹಾನ್ ಅರಸಿ ರಾಣಿ ಚೆನ್ನಾಭೈರಾದೇವಿ. ಕಾಳುಮೆಣಸಿನ ರಾಣಿ, ಗೇರುಸೊಪ್ಪೆಯ ರಾಣಿ ಎಂದೇ ಪ್ರಸಿದ್ಧಳಾದವಳು ರಾಣಿ ಚೆನ್ನಾಭೈರಾದೇವಿ. ಈಕೆ ತನ್ನ ಆಳ್ವಿಕೆ ನಡೆಸಿದ ಕಾಲ ಸಾಮಾನ್ಯ ಶಕ ವರ್ಷ 1552 ರಿಂದ ಸಾಮಾನ್ಯ ಶಕ ವರ್ಷ 1606. ಈ ಅವಧಿ ಜನಪರವೂ, ಪ್ರಗತಿಪರವೂ ಆಗಿರದೇ ರಾಜನೀತಿಯ ಚಾಕಚಕ್ಯತೆಯ ಮಹತ್ತಾದರ್ಶವಾಗಿ ನಮ್ಮೆದುರಿಗಿದೆ.

**ಸಾಳ್ವ ವಂಶದ ಮನೆತನ:** ವಿಜಯನಗರದ ಸಾಳ್ವ ವಂಶದ ಅರಸು ಮನೆತನಕ್ಕೆ ಸೇರಿದ ಈಕೆ ಮಹಾಪ್ರಭು ವೀರಪ್ಪ ಒಡೆಯರು ಮತ್ತು ಮಹಾಮಂಡಲೇಶ್ವರಿ ಭೈರಾದೇವಿ ಅವರ ಮಗಳು. ಸಾ.ಶ. 1553ರಿಂದಲೇ ಗೇರುಸೊಪ್ಪೆ ಮತ್ತು ಹಾಡುವಳ್ಳಿ (ಸಂಗೀತಪುರ) ಈಕೆಯ ಆಡಳಿತಕ್ಕೆ ಒಳಪಟ್ಟಿತ್ತು. ಈಕೆಯ ಆಡಳಿತಕ್ಕೂ ಮುನ್ನ ಹಾಡುವಳ್ಳಿ ರಾಜ ವಂಶದವರು, ಗೇರುಸೊಪ್ಪೆಯ ರಾಜವಂಶದವರು ಸಾಳ್ವ ಮನೆತನಕ್ಕೆ ಸೇರಿದ್ದರೂ ಅವರುಗಳ ನಡುವೆ ಒಳಜಗಳಿದ್ದವು, ರಾಜ್ಯಭಾರವೂ ಪ್ರತ್ಯೇಕವಾಗಿ ನಡೆಯುತ್ತಿತ್ತು. ಆದರೆ ರಾಜ್ಯಭಾರ ಮಾಡಿದ ಮೂವರು ಮಹಾಮಂಡಲೇಶ್ವರಿ ಮಹರಾಣಿಯರ ಕಾರಣಕ್ಕಾಗಿ ಗೆಳೆತನ ಬೆಳೆಯಿತು, ಹಗೆತನ ಕಡಿಮೆಯಾಯಿತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕೊಟ್ಟವಳು ರಾಣಿ ಚೆನ್ನಭೈರಾದೇವಿ.

**ಕೆಚ್ಚೆದೆಯ ರಾಣಿ:** ರಾಣಿ ಚೆನ್ನಭೈರಾದೇವಿ ತಾನಾಗಿಯೇ ಯಾರ ಮೇಲೂ ದಾಳಿ ಮಾಡಿ ಸಾಮ್ರಾಜ್ಯ ವಿಸ್ತಾರಕ್ಕೆ ಹೋದವಳಲ್ಲ. ಆದರೆ ದಂಗೆದ್ದು ಬಂದವರ ಬಗ್ಗುಬಡಿಯದೆ ಸುಮ್ಮನ್ನಿರಲಿಲ್ಲ. ಬೀಳಗಿಯ ಅರಸಪ್ಪ ಒಡೆಯನ ವಿರುದ್ಧ ಜಯ ಸಾಧಿಸಿದಳು. 1559 ಮತ್ತು 1570ರಲ್ಲಿ ಪೋರ್ಚುಗೀಸರನ್ನು ಸೋಲಿಸಿದಳು. ದಂಡೆತ್ತಿ ಬಂದ ಕೆಳದಿಯ ಅರಸರನ್ನು ಯುದ್ಧದಲ್ಲಿ ಸೋಲಿಸಿ ಹಲವು ವರ್ಷಗಳ ಕಾಲ ಕೆಳದಿ ಯುದ್ಧದ ಕುರಿತು ಯೋಚಿಸದಂತೆ ಮಾಡಿ, ಪರಾಕ್ರಮವನ್ನು ಮೆರೆದ ಪರಾಕ್ರಮಿ ಅರಸಿ ರಾಣಿ ಚೆನ್ನಭೈರಾದೇವಿ. ದಂಡೆತ್ತಿ ಬಂದವರ ವಿರುದ್ಧ ಯುದ್ಧವನ್ನೂ ಮಾಡಿದ್ದಳು, ಚತುರತೆಯಿಂದ ಎಲ್ಲರೊಂದಿಗೂ ಸ್ನೇಹಮಯಿಯೂ ಆಗಿದ್ದಳು

**ಪ್ರಜಾಪ್ರಿಯ ರಾಣಿ:** ಚೆನ್ನಭೈರಾದೇವಿ ತನ್ನೆಲ್ಲಾ ಪ್ರಜೆಗಳನ್ನು ಸಮನಾಗಿ ಕಂಡವಳು. ಎಲ್ಲರಿಗೂ ವಿಶೇಷ ಸವಲತ್ತುಗಳನ್ನು ನೀಡಿದವಳು. ಈಕೆಯ ಆಳ್ವಿಕೆಯಲ್ಲಿ ಯುರೋಪಿನ ರಾಷ್ಟ್ರಗಳಿಗೆ ಕಾಳುಮೆಣಸು, ದಾಲ್ಚಿನ್ನಿ, ಅಡಿಕೆ, ಶುಂಠಿ, ಗಂಧಗಳನ್ನು ರಫ್ತು ಮಾಡಲಾಗುತ್ತಿತ್ತು. ಈಕೆಯ ಕಾಲದ ಮಿರ್ಜಾನ್ ಕೋಟೆ, ಕಾನೂರು ಕೋಟೆಗಳನ್ನೂ ಈಗಲೂ ಕಾಣಬಹುದು. ಈಕೆ 1562ರಲ್ಲಿ ಕಾರ್ಕಳದಲ್ಲಿನ ಚತುರ್ಮುಖ ಬಸದಿಯನ್ನು ಕಟ್ಟಿಸಿದಳು. ವೇಣುಪುರದ ಯೋಗಾನರಸಿಂಹ ಸ್ವಾಮಿ ದೇಗುಲ ಮತ್ತು ವರ್ಧಮಾನ ಬಸದಿಗಳ ಜೀರ್ಣೋದ್ಧಾರಕ್ಕೂ ರಾಣಿ ನೆರವು ನೀಡಿದ್ದಳು. ಅನೇಕ ಶೈವ, ವೈಷ್ಣವ ಮತ್ತು ಶಕ್ತಿ ದೇಗುಲಗಳನ್ನು ಕಟ್ಟಲು, ಜೀರ್ಣೋದ್ಧಾರಕ್ಕೆ ಸಹಕಾರವನ್ನಿತ್ತಿದ್ದಳು. ಪೋರ್ಚುಗೀಸರ ಮತಾಂತರದಿಂದ ತಪ್ಪಿಸಿಕೊಳ್ಳಲು ಚೆನ್ನಭೈರಾದೇವಿಯ ರಾಜ್ಯಕ್ಕೆ ಆಶ್ರಯ ಕೋರಿ ಬಂದ ಜನರಿಗೆ ರಾಣಿ ತನ್ನ ರಾಜ್ಯದಲ್ಲಿ ಆಶ್ರಯ ಕೊಟ್ಟಳು.

ಐದು ದಶಕಗಳ ಕಾಲ ಕರಾವಳಿ ಪ್ರದೇಶದ ಬಹುಭಾಗವನ್ನು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಕ್ಷೇತ್ರಗಳಲ್ಲಿ ಶ್ರೀಮಂತಗೊಳಿಸುವಲ್ಲಿ ತನ್ನ ಜೀವನವನ್ನು ಸಮರ್ಪಿಸಿದ ರಾಣಿ ಚೆನ್ನಾಭೈರಾದೇವಿ ಅವರನ್ನು ಸ್ಮರಿಸಿಕೊಳ್ಳುವ ಮೂಲಕ ಇತಿಹಾಸವನ್ನು ಶ್ರೀಮಂತಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ.

# ಪರೋಪಕಾರಾರ್ಥಮಿದಂ ಶರೀರಮ್

ದೇಹದಾನದ ಸಂಕಲ್ಪ ಎನ್ನುವುದು ಜೀವನದ ನಂತರವೂ ಬದುಕುವ ಒಂದು ವಿಶಿಷ್ಟ ಪ್ರಯಾಣ. ಇಂಥ ಪುಣ್ಯಕಾರ್ಯಕ್ಕೆ ವ್ಯವಸ್ಥಿತ ರೂಪ ನೀಡಲು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕರಾಗಿದ್ದ ದಿ. ನಾನಾಜಿ ದೇಶಮುಖರು, ಮಹರ್ಷಿ ದಧೀಚಿ ಅವರಿಂದ ಪ್ರೇರಿತರಾಗಿ, ಅಕ್ಟೋಬರ್ 11, 1997ರಂದು ದಧೀಚಿ ದೇಹದಾನ/ಅಂಗದಾನ ಸಮಿತಿಯನ್ನು ರಚಿಸಿದ್ದಲ್ಲದೆ, ಮೊದಲ ದೇಹದಾನ ನಿರ್ಣಯಪತ್ರವನ್ನು ತಾವೇ ತುಂಬಿದ್ದರು. ಈ ಸಮಿತಿಯು ದೆಹಲಿಯ ಎನ್.ಸಿ.ಆರ್. ಸೇರಿದಂತೆ ಸುಮಾರು 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 300 ಕಾರ್ಯಕರ್ತರ ಕಠಿಣ ಪರಿಶ್ರಮದ ಫಲವಾಗಿ, ಕಳೆದ 13 ವರ್ಷಗಳಲ್ಲಿ ಸುಮಾರು 1300 ಮೃತ ವ್ಯಕ್ತಿಗಳ ವಿವಿಧ ಅಂಗಗಳನ್ನು ಇತರರ ದೇಹಗಳಲ್ಲಿ ಜೀವಂತವಾಗಿರಿಸಲಾಗಿದೆ. ಇದರಲ್ಲಿ 375 ಮಂದಿಯ ಸಂಪೂರ್ಣ ದೇಹ ಹಾಗೂ 925ಕ್ಕೂ ಹೆಚ್ಚು ಜನರ ಕಣ್ಣುಗಳನ್ನು ದಾನ ಮಾಡಲಾಗಿದೆ. ಸಮಿತಿಯ ಸ್ವಯಂಸೇವಕರು ಈವರೆಗೆ 18000ಕ್ಕೂ ಹೆಚ್ಚು ಸಂಕಲ್ಪಪತ್ರಗಳನ್ನು ಭರ್ತಿ ಮಾಡಿದ್ದಾರೆ.

ದಧೀಚಿ ದೇಹದಾನ ಸಮಿತಿಯಿಂದ ಸ್ಫೂರ್ತಿ ಪಡೆದ ಇತರ 46 ಸಮಿತಿಗಳು ಈಗ ಸ್ವತಂತ್ರವಾಗಿ ದೇಶಾದ್ಯಂತ ಇದೇ ಕಾರ್ಯ ನಿರ್ವಹಿಸುತ್ತಿವೆ. ಅವೆಲ್ಲವುಗಳ ಮಾರ್ಗದರ್ಶನವನ್ನು ದಧೀಚಿ ದೇಹದಾನ ಸಮಿತಿಯ ಸಂಸ್ಥಾಪಕ ಮತ್ತು ವಿಶ್ವ ಹಿಂದೂ ಪರಿಷತ್ತಿನ ಪ್ರಸ್ತುತ ಕಾರ್ಯಾಧ್ಯಕ್ಷರಾದ ಅಲೋಕ್ ವಹಿಸಿದ್ದಾರೆ.

ಅಮೃತಸರದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಅಂಗರಚನಾಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥರಾಗಿದ್ದ ಡಾ. ಹುಕುಮ್ ಸಿಂಗ್ ವಿರ್ಕ್‌ರವರ ಅಸ್ಥಿಪಂಜರವನ್ನು ಕಂಡಾಗ, ಅವರು ಮರಣೋತ್ತರವಾಗಿ ತಮ್ಮ ದೇಹದಾನ ಮಾಡಿದ್ದರೆಂಬುದು ತಿಳಿಯಿತು. "ನನ್ನ ಜೀವನವಿಡೀ, ಇತರರ ದೇಹದ ಸಹಾಯದಿಂದ ನನ್ನ ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದೇನೆ ಮತ್ತು ನನ್ನ ಸಾವಿನ ನಂತರ ನನ್ನ ಕಾಲೇಜಿನ ವಿದ್ಯಾರ್ಥಿಗಳು ನನ್ನದೇ ದೇಹವನ್ನು ಬಳಸಿಕೊಂಡು ತಮ್ಮ ಅಧ್ಯಯನವನ್ನು ಮುಂದುವರಿಸಬೇಕು" ಎಂಬ ಆಶಯ ಅವರದ್ದಾಗಿತ್ತು. ವೈದ್ಯಕೀಯ ಕ್ಷೇತ್ರಗಳಲ್ಲಿ ಒಂದು ದೇಹದ ಮೇಲೆ 4–5 ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ಆದರೆ, ಮೃತ ದೇಹಗಳ ಕೊರತೆಯಿಂದಾಗಿ ಒಂದೇ ಶರೀರದ ಅಧ್ಯಯನವನ್ನು 40–50 ವಿದ್ಯಾರ್ಥಿಗಳು ಮಾಡಬೇಕಾದ ಅನಿವಾರ್ಯತೆ ಇದೆ. ಆಗ



ಅಲೋಕ್ ಅವರಲ್ಲಿ ಹುಟ್ಟಿದ ಯೋಚನೆ, ಬೆಳೆದು 1995ರಲ್ಲಿ ತಮ್ಮ 7 ಜನ ಜೊತೆಗಾರರೊಂದಿಗೆ ದೇಹದಾನದ ಇಚ್ಛೆಯ ಪತ್ರವನ್ನು ನೋಂದಾಯಿಸಿಕೊಂಡರು. ನಂತರ 1997ರಲ್ಲಿ ದಧೀಚಿ ದೇಹದಾನ ಸಮಿತಿಯನ್ನು ರಚಿಸಲಾಯಿತೆಂದು ಅಲೋಕ್ ಹೇಳುತ್ತಾರೆ.

ಕೆಲವೊಮ್ಮೆ ಮೃತದೇಹ ಸಾಗಿಸಲು ವಾಹನಗಳಿಲ್ಲದೆ, ಡ್ರೈವರ್‌ಗಳಿಲ್ಲದೆ, ಕುಟುಂಬದವರು ನಿರ್ಣಯ ತೆಗೆದುಕೊಳ್ಳುವಷ್ಟರಲ್ಲಿ ತಡಮಾಡಿ, ಮೃತದೇಹ ಸ್ವೀಕರಿಸಬೇಕಾದ ವೈದ್ಯಕೀಯ ಕಾಲೇಜುಗಳಿಗೆ ಕರೆ ಸ್ವೀಕರಿಸದೆ ತೊಂದರೆಯಾಗುತ್ತಿತ್ತು. ಆದರೆ ಸುಮಾರು 3–4 ವರ್ಷಗಳ ಅವಿರತ ಪ್ರಯತ್ನದ ಬಳಿಕ ದೆಹಲಿಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ದೇಹದಾನದ ಪ್ರಕ್ರಿಯೆ 24x7 ಸುಗಮವಾಗುವ ಪರಿಸ್ಥಿತಿ ನಿರ್ಮಾಣವಾಯಿತು ಎಂದು ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ಮಂಜು ಪ್ರಭಾ ತಿಳಿಸುತ್ತಾರೆ.

ನೋಯ್ಡಾದ ಸ್ವಯಂಸೇವಕ ಕುಟುಂಬವೊಂದರ 7 ದಿನಗಳ ಹಸುಳೆಯನ್ನು ಉಳಿಸಲು ಸಾಧ್ಯವಾಗದಿದ್ದಾಗ, ಆ ಕುಟುಂಬದವರು ಆ ಮಗುವಿನ ದೇಹದಾನ ಮಾಡಿ ಮಾದರಿಯಾದರು. ಆ ಕಂದ, ದಧೀಚಿ ದೇಹದಾನ ಸಮಿತಿಯ ಅತಿ ಕಿರಿಯ ದಾನಿಯಾಯಿತು. ಹೃದಯ ಮರುಜೋಡಣೆಯ ಬಳಿಕ ಪ್ರೀತಿ ಉನ್ನಾಳೆ ಅವರ ಅನುಭವವನ್ನು ಕೇಳಿದ ಪಂಜಾಬ್ ಕೇಸರಿಯ ನಿರ್ದೇಶಕಿ ಕಿರಣ್ ಚೋಪ್ರಾರವರು ಸ್ಥಳದಲ್ಲಿಯೇ ತಮ್ಮ ದೇಹದಾನದ ಪ್ರತಿಜ್ಞೆ ಕೈಗೊಂಡರು. ದಾನ ಬಯಸುವ ಕುಟುಂಬದವರು ಸಮಿತಿಗೆ ಕರೆ ಮಾಡಿದರೆ ಸಾಕು, ಸಮಿತಿಯ 300 ಸ್ವಯಂಸೇವಕರು ನಿಸ್ವಾರ್ಥವಾಗಿ ಹಗಲಿರುಳೂ ಖುದ್ದಾಗಿ ಸಹಾಯ ಮಾಡುತ್ತಾರೆ

ಸಂಪರ್ಕ: ಡಾ. ವಿಶಾಲ್ ಚಡ್ಡಾ – 98183 45704

## ಎಲ್ಲೋ ಕೇಳಿದ ಕಥೆ

### ಹಾಲು–ಜೇನು

ಮೌಲವಿ ಲಿಯಾಕತ್ ಹುಸೇನರು ಬಂಗಾಲದ ಓರ್ವ ಸ್ವಾತಂತ್ರ್ಯ ಹೋರಾಟಗಾರರು. ವರ್ಷದಲ್ಲಿ ಹೆಚ್ಚಿನ ದಿನಗಳು ಕಾರಾಗೃಹದಲ್ಲಿ ಇರುತ್ತಿದ್ದ ಬದುಕು ಅವರದು. ವಯಸ್ಸು ಅರುವತ್ತು ದಾಟಿದ್ದರೂ ತರುಣರನ್ನು ನಾಚಿಸುವಷ್ಟು ಉತ್ಸಾಹಿ. ಬಡಬಗ್ಗರಿಗಾಗಿ ಹಣ ಸಂಗ್ರಹಿಸಿ ಹಂಚುವುದೆಂದರೆ ಎಲ್ಲಿಲ್ಲದ ಆನಂದ. ಬಡವಿದ್ಯಾರ್ಥಿಗಳಿಗೆ ಪುಸ್ತಕ, ಬಟ್ಟೆ, ಶುಲ್ಕ ಇತ್ಯಾದಿಗಳ ವ್ಯವಸ್ಥೆ ಮಾಡುವುದು ಅವರ ಪ್ರಾಣಪ್ರಿಯ ಕಾಯಕ. ಇಂತಹ ಹತ್ತಾರು ಕೆಲಸಗಳಲ್ಲಿ ಸದಾ ಮಗ್ನರಾಗಿರುತ್ತಿದ್ದವರು ಅವರು.


ಮೌಲವಿ ಅವರು ಅಪ್ಪಟ ದೇಶಭಕ್ತರು, ಸ್ವದೇಶಿ, ವಸ್ತುಗಳ ಬಗ್ಗೆ ಅವರದು ನಿತಾಂತ ನಿಷ್ಠೆ. ಪಾಯಿಜಾಮ, ಜುಬ್ಬ ಮತ್ತು ಬಿಳಿಟೋಪಿ ಇಂತಹ ಸರಳ ಉಡುಪಿನಲ್ಲೇ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದವರು. 'ಕುಬೇರ ವಸ್ತು ಭಂಡಾರ' ಎಂಬ ಹೆಸರಲ್ಲಿ ಸ್ವದೇಶಿ ವಸ್ತುಗಳ ಅಂಗಡಿಯೊಂದನ್ನು ಕೆಲವು ದಿನಗಳ ಕಾಲ ನಡೆಸಿದ್ದೂ ಉಂಟು. ಸ್ವದೇಶಿ ವಸ್ತುಗಳ ಪ್ರಚಾರಕ್ಕಾಗಿ ಪ್ರಭಾತ ಫೇರಿ, ಸಭೆ, ಮೆರವಣಿಗೆಗಳಲ್ಲಿ ಕೈಯಲ್ಲಿ ಭಗವಾಧ್ವಜ ಹಿಡಿದುಕೊಂಡೇ ಮೌಲವಿ ಅವರು ಮುಂದಾಳುತನ ವಹಿಸುತ್ತಿದ್ದರು. ಅವರ ಆಪ್ತರ ಗುಂಪಿನಲ್ಲಿ ಕೇಶವರಾವ್ ಸಹ ಒಬ್ಬರು. ಅವರ ಸಭೆಗಳನ್ನು ಏರ್ಪಡಿಸುತ್ತಿದ್ದರು. ಮೌಲವಿ ಅವರು ಒಮ್ಮೆ ಕಾಯಿಲೆ ಮಲಗಿದ್ದಾಗ ಸುಮಾರು ಎರಡು ತಿಂಗಳ ಕಾಲ ಅವರ ಸ್ವಂತ ಮಗನಂತೆ ಕೇಶವರಾವ್ ಅವರ ಶುಶ್ರೂಷೆ ಮಾಡಿರುವುದೂ ಇದೆ.

ಕೇಶವರಾವ್‌ರಂತೆ ಮೌಲವಿಯವರಿಗೂ ಲೋಕಮಾನ್ಯ ತಿಲಕರ ಬಗ್ಗೆ ಅನನ್ಯ ಭಕ್ತಿ. ಒಮ್ಮೆ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಭೆಯೊಂದರಲ್ಲಿ ಭಾಷಣಕಾರ, ಲೋಕಮಾನ್ಯರ ಬಗ್ಗೆ ಅಪಶಬ್ದಗಳನ್ನಾಡಿದ. ಸಭೆಯ ಅಧ್ಯಕ್ಷರಾಗಿದ್ದ ಮೌಲವಿಯವರು ಸಿಟ್ಟು ತಡೆಯಲಾಗದೆ ಒಳಗಿಂದೊಳಗೆ ಕುದಿಯುತ್ತಿದ್ದರು. ಮುಂದೆ ಕುಳಿತಿದ್ದ ಕೇಶವರಾವ್ ಅವರದೂ ಅದೇ ಮನಸ್ಥಿತಿ. ಅವರು ನೇರವಾಗಿ ವೇದಿಕೆ ಹತ್ತಿ ಸಭೆ ನಡೆಯುತ್ತಿದ್ದಂತೆಯೇ ಭಾಷಣಕಾರರ ಕಪಾಳಕ್ಕೆ ಎರಡು ಬಿಗಿದರು. ಕೇಶವರಾವ್ ಅವರ ಕ್ರಮಕ್ಕೆ ಮೌಲವಿ ಅವರು ಮನಃಪೂರ್ವಕ ಮೆಚ್ಚುಗೆ ತಿಳಿಸಿದರು.

## ಪುಸ್ತಕ ಪರಿಚಯ

### ಕರಿನೀರ ವೀರ

**ಲೇಖಕ:** ಅಡ್ಡಂಡ ಸಿ ಕಾರ್ಯಪ್ಪ
**ಪ್ರಕಾಶನ:** ಅಯೋಧ್ಯಾ ಪಬ್ಲಿಕೇಶನ್ಸ್
**ಬೆಲೆ:** 120.00




ಸಾವರ್ಕರ್ ಅವರ ಮಹಾ ವ್ಯಕ್ತಿತ್ವ, ಅವರ ಸಮಗ್ರ ಕ್ರಾಂತಿಕಾರಿ ಜೀವನದ ಕುರಿತು ಅಡ್ಡಂಡ ಕಾರ್ಯಪ್ಪ ಬರೆದ ಈ ನಾಟಕ ಬೆಳಕು ಚೆಲ್ಲಿದೆ. ರಂಗಭೂಮಿಯ ಕತ್ತಲೆಯಲ್ಲಿ ನಿಂತಿದ್ದ ಸಾವರ್ಕರ್ ಮೇಲೆ ಈ ನಾಟಕ ಬೆಳಕು ಹಾಯಿಸಿರುವ ರೀತಿ ಅಪರೂಪದ್ದು. ಪ್ರಸಿದ್ಧ ರಾಜಕೀಯ ವ್ಯಕ್ತಿಗಳಾದ ಗಾಂಧಿ, ನೆಹರೂ, ಸುಭಾಷ್, ವಾಜಪೇಯಿ, ಸಾವರ್ಕರ್ ಜೊತೆಗೆ ಚರಿತ್ರೆಕಾರ ಧನಂಜಯ್ ಕೀರ್ 'ಕರಿನೀರ ವೀರ' ನಾಟಕದಲ್ಲಿ ಪಾತ್ರಗಳಾಗಿರುವುದು, ಜೊತೆಗೆ ಸಂಕೀರ್ಣ ವಿಷಯಗಳನ್ನು ಆರಿಸಿಕೊಂಡು ನಾಟಕ ರಚಿಸುವ ಕೌಶಲ ಇವರಿಗೆ ಸಿದ್ಧಿಸುತ್ತಿರುವುದರ ಸಾಕ್ಷಿ.

ಸಮಕಾಲೀನ ದೇಶಕಾಲಗಳ ಕಟಕಟೆಯಲ್ಲಿ ಇಲ್ಲಿನ ಪಾತ್ರಗಳ ಅಂತರಂಗ ದರ್ಶನವಾಗುತ್ತದೆ. ಸಾಹಿತ್ಯದ ಕೇಂದ್ರ ಜೀವಾಳ ಮನುಷ್ಯನಾಗಿರುವುದರಿಂದ ಒಬ್ಬ ಮನುಷ್ಯನಾಗಿ ಸಾವರ್ಕರ್ ಅವರ ಜೀವನದ ಪ್ರಮುಖ ಮಜಲುಗಳನ್ನು ನಾಟಕೀಯಗೊಳಿಸುವಲ್ಲಿ ಕಾರ್ಯಪ್ಪ ಸಾಕಷ್ಟು ಸಫಲರಾಗಿದ್ದಾರೆ. ಕನ್ನಡದಲ್ಲಿ ಇದು ಸಾವರ್ಕರ್ ಕೇಂದ್ರಿತ ಪ್ರಥಮ ನಾಟಕ. ಸಾವರ್ಕರ್ ಅವರ ರಮ್ಯಾದ್ಭುತ ಜೀವನವನ್ನು ರಂಗಪಠ್ಯವನ್ನಾಗಿ ರೂಪಿಸಲಾಗಿದೆ.

ವೆಬ್ ಸೈಟ್: https://www.ayodhyabooks.com/product/karineera-veera/

**ಸಂಪಾದಕೀಯ ಸಹಕಾರ:** ತನ್ಮಯಿ ಪ್ರೇಮ್‌ಕುಮಾರ್, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ಪ್ರಣವ ಭಟ್

### ಕಾಶಿಯಲ್ಲಿ ಶಿವ ಥೀಮ್‌ನ ಕ್ರಿಕೆಟ್ ಸ್ಟೇಡಿಯಂ



ಪ್ರಧಾನಿ ಮೋದಿ ಅವರು ಸೆಪ್ಟೆಂಬರ್ 23 ರಂದು ವಾರಣಾಸಿಯಲ್ಲಿ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಶಂಕುಸ್ಥಾಪನೆ ಮಾಡಿದರು. ಅಂತರಾಷ್ಟ್ರೀಯ ಕ್ರೀಡಾಂಗಣವನ್ನು ಶಿವನಿಗೆ ಸಂಬಂಧಿಸಿದ ವಿಷಯದ ಮೇಲೆ ನಿರ್ಮಿಸಲಾಗುತ್ತಿದೆ ಎಂಬುದು ವಿಶೇಷ. ಬಿಲ್ವಪತ್ರೆಯನ್ನು ಹೋಲುವ ಪ್ರವೇಶ ದ್ವಾರ, ಢಮರುಗವನ್ನು ಹೋಲುವ ಸ್ಟೇಡಿಯಂ ಡೂಮ್, ತ್ರಿಶೂಲದೊಂದಿಗೆ ಇರುವ ಫ್ಲಡ್ ಲೈಟ್ಸ್ ಸ್ತಂಭಗಳೊಂದಿಗೆ ಕಾಶಿಯಲ್ಲಿನ ಹೊಸ ಸ್ಟೇಡಿಯಂ ನಿರ್ಮಾಣವಾಗಲಿದೆ. 325 ಕೋಟಿ ರೂ.ಗೂ ಹೆಚ್ಚು ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗಲಿದೆ.

### ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾದ 8.75 ಕೋಟಿ ಜನರು



ಅಕ್ಟೋಬರ್ 1 ರಂದು "ಏಕ್ ತಾರೀಖ್ ಏಕ್ ಘಂಟಾ ಏಕ್ ಸಾಥ್" ಉಪಕ್ರಮವನ್ನು ಕೇಂದ್ರ ಸರ್ಕಾರ ಜನತೆಯ ಮುಂದಿರಿಸಿತ್ತು. ಇದರ ಭಾಗವಾಗಿ ಸುಮಾರು 8.75 ಕೋಟಿ ಜನರು ದೇಶಾದ್ಯಂತ 9 ಲಕ್ಷ ತಾಣಗಳಲ್ಲಿ ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿ ಶ್ರಮದಾನವನ್ನು ಮಾಡಿದ್ದಾರೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಅಭಿಯಾನದಡಿ ರಸ್ತೆಗಳು, ಹೆದ್ದಾರಿಗಳು ಮತ್ತು ಟೋಲ್ ಪ್ಲಾಜಾಗಳು, ರೈಲ್ವೆ ಹಳಿಗಳು, ಆರೋಗ್ಯ ಸಂಸ್ಥೆಗಳು, ಅಂಗನವಾಡಿ ಕೇಂದ್ರಗಳು, ಪ್ರವಾಸಿ ಸ್ಥಳಗಳು, ವಸತಿ ಕಾಲೋನಿಗಳು, ಜಲಮೂಲಗಳು ಮತ್ತು ಪೂಜಾ ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನಗಳನ್ನು ಕೈಗೊಳ್ಳಲಾಯಿತು.

## ಸಾಲುದ್ದದ ಸುದ್ದಿಗಳು

### ಆಹಾರ ಪ್ಯಾಕ್ ಮಾಡಲು ಪತ್ರಿಕೆ ಬಳಸದಂತೆ FSSAI ಸೂಚನೆ

ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಆಹಾರ ಮಾರಾಟಗಾರರು ಮತ್ತು ಗ್ರಾಹಕರು ಆಹಾರ ಪದಾರ್ಥಗಳನ್ನು ಪ್ಯಾಕಿಂಗ್ ಮಾಡಲು, ಸಂಗ್ರಹಿಸಲು ಮತ್ತು ಬಡಿಸಲು ಪತ್ರಿಕೆಗಳನ್ನು ಬಳಸುವುದನ್ನು ತಕ್ಷಣದಿಂದ ನಿಲ್ಲಿಸಬೇಕು ಎಂದು ಒತ್ತಾಯಿಸಿದೆ. ವರದಿಯ ಪ್ರಕಾರ, ದಿನಪತ್ರಿಕೆಗಳಲ್ಲಿ ಬಳಸುವ ಶಾಯಿಯು ಕೆಲವು ರಾಸಾಯನಿಕಗಳನ್ನು ಹೊಂದಿದ್ದು ಅದು ವಿವಿಧ ಆರೋಗ್ಯ ಅಪಾಯಗಳನ್ನು ಉಂಟುಮಾಡಬಹುದು ಎಂದು ಹೇಳಲಾಗಿದೆ.

### ಹಂಪಿ ಭಾರತದ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ



ಕರ್ನಾಟಕದ ವಿಶ್ವ ಪರಂಪರೆಯ ತಾಣವಾದ ಹಂಪಿಯನ್ನು ಪ್ರವಾಸೋದ್ಯಮ ಸಚಿವಾಲಯವು ಭಾರತದ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ–2023 ಎಂದು ಘೋಷಿಸಿದೆ. ಭಾರತದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸ್ವೀಕರಿಸಿದ 795 ಅರ್ಜಿಗಳಲ್ಲಿ ಹಂಪಿಯನ್ನು ಆಯ್ಕೆ ಮಾಡಲಾಗಿದೆ. ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಅಂಗವಾಗಿ ಯುನೆಸ್ಕೋ–ರಕ್ಷಿತ ತಾಣ, ಸಚಿವಾಲಯದ ಅಡಿಯಲ್ಲಿ ಕೇಂದ್ರೀಯ ನೋಡಲ್ ಏಜೆನ್ಸಿಯಾದ ರೂರಲ್ ಟೂರಿಸಂ ಮತ್ತು ರೂರಲ್ ಹೋಂಸ್ಟೇ ಆಯೋಜಿಸಿದ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ ಸ್ಪರ್ಧೆ–2023ನಲ್ಲಿ ಈ ಘೋಷಣೆ ಮಾಡಲಾಗಿದೆ. ಇದು ಗ್ರಾಮೀಣ ಮೂಲಸೌಕರ್ಯ ಮತ್ತು ಅದರ ಸಂಸ್ಕೃತಿಯನ್ನು ಸುಧಾರಿಸಲು ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹಣವನ್ನು ಪಡೆಯಲು ಸಹಾಯ ಮಾಡುತ್ತದೆ.

### ಕಾನೂನಾಗಿ ಪರಿವರ್ತನೆಯಾದ ಮಹಿಳಾ ಮೀಸಲಾತಿ ಮಸೂದೆ

ಸಂಸತ್ತಿನ ಉಭಯ ಸದನಗಳಲ್ಲಿ ಐತಿಹಾಸಿಕ ಅಂಗೀಕಾರ ಪಡೆದ ಮಹಿಳಾ ಮೀಸಲಾತಿ ಮಸೂದೆಯು ಸೆಪ್ಟೆಂಬರ್ 29 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಂಕಿತ ಪಡೆದುಕೊಂಡಿದೆ. ಮುರ್ಮು ಅವರ ಒಪ್ಪಿಗೆಯೊಂದಿಗೆ ಮಸೂದೆ ಈಗ ಕಾನೂನಾಗಿ ಪರಿವರ್ತನೆಗೊಂಡಿದೆ. ಭಾರತ ಸರ್ಕಾರವು ಗೆಜೆಟ್ ಅಧಿಸೂಚನೆಯಲ್ಲಿ, ರಾಷ್ಟ್ರಪತಿಗಳ ಅನುಮೋದನೆಯ ನಂತರ ಮಸೂದೆಯು ಕಾಯಿದೆಯಾಗಿ ಮಾರ್ಪಟ್ಟಿದೆ ಎಂದು ಹೇಳಿದೆ. ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸುವ ದಿನಾಂಕದಂದು ಕಾನೂನು ಜಾರಿಗೆ ಬರುತ್ತದೆ ಎಂದು ಅದು ಹೇಳಿದೆ.

### ಭಾರತೀಯ ವಾಯುಪಡೆಗೆ ಮೊದಲ ತೇಜಸ್ ಯುದ್ಧವಿಮಾನ




ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ತಯಾರಿಸಿರುವ ಎರಡು ಸೀಟಿನ ಆವೃತ್ತಿಯ ಮೊದಲ ತೇಜಸ್ ಯುದ್ಧವಿಮಾನವನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸಲಾಯಿತು. ಇದು ಲಘು ಯುದ್ಧ ವಿಮಾನವಾಗಿದ್ದು, ಎಲ್ಲ ಹವಾಗುಣಕ್ಕೂ ಹೊಂದಿಕೊಳ್ಳುತ್ತದೆ. ತೇಜಸ್ ಪ್ರಮುಖವಾಗಿ ತರಬೇತಿಗಾಗಿ ಬಳಸಲಾಗುವುದಾದರೂ, ಅವಶ್ಯಕತೆ ಬಿದ್ದರೆ, ಯುದ್ಧ ಮಾಡುವ ಸಾಮರ್ಥ್ಯ ಹೊಂದಿದೆ. ಈ ವರ್ಷ ಒಟ್ಟು 8 ತೇಜಸ್ ಯುದ್ಧ ವಿಮಾನಗಳನ್ನು ಹೆಚ್‌ಎಎಲ್ ಪೂರೈಸಲಿದೆ.

## 40 ದೇಶಗಳ 700ಕ್ಕೂ ಹೆಚ್ಚು ವಿಧದ ಹಣ್ಣು ಕೃಷಿ ಮಾಡುತ್ತಿರುವ ಕೃಷಿಕ

ಪ್ರೇರಣಾ

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಅನಿಲ್ ಬಳಂಜ ಅವರು ತಮ್ಮ ಎಳವೆಯಲ್ಲೇ ಬೆಳೆಸಿಕೊಂಡ ಆಸಕ್ತಿಯ ಫಲವಾಗಿ ಕಳೆದ 20 ವರ್ಷಗಳಲ್ಲಿ ವಿಶ್ವದ 40 ದೇಶಗಳ ಸುಮಾರು 700ಕ್ಕೂ ಅಧಿಕ ವಿಧದ ಹಣ್ಣುಗಳನ್ನು ಬೆಳೆಸುತ್ತಿರುವ ಅಪರೂಪದ ಕೃಷಿಕರು. ವಿದೇಶದಲ್ಲಿರುವ ತಮ್ಮ ಸ್ನೇಹಿತರು ಮತ್ತು ನರ್ಸರಿಗಳಿಂದ ಬೀಜಗಳನ್ನು ಸಂಗ್ರಹಿಸಿ ಭಾರತದಲ್ಲಿ ಸೆಂಪೆಡಾಕ್ (ಮಲೇಷಿಯನ್ ಹಣ್ಣು) ಕೊಯ್ಲು ಮಾಡಿದ ಮೊದಲ ಕೃಷಿಕರು ಎನಿಸಿದರು.

ತಮ್ಮ 30 ಎಕರೆ ಜಮೀನಿನಲ್ಲಿ ಮಲೇಷ್ಯಾ, ಕಾಂಬೋಡಿಯಾ, ವಿಯೆಟ್ನಾಂ, ಬ್ರೆಜಿಲ್, ಥೈಲ್ಯಾಂಡ್ ಇನ್ನಿತರ ದೇಶಗಳ ಅಪರೂಪದ ಸಸ್ಯಗಳನ್ನು ಬೆಳೆಸುತ್ತಿದ್ದಾರೆ. ಕೆಲವು ಸಸ್ಯಗಳು ಇಳುವರಿಯನ್ನು ನೀಡಲು 8–15 ವರ್ಷಗಳವರೆಗೆ ತೆಗೆದುಕೊಳ್ಳುತ್ತದೆ. ಕೆಲವು ನಾಟಿ ತಳಿಗಳು 2–3 ವರ್ಷಗಳಲ್ಲಿ ಇಳುವರಿಯನ್ನು ನೀಡಲು ಪ್ರಾರಂಭಿಸುತ್ತವೆ. ಅನುಕೂಲಕರ ತಾಪಮಾನ, ಮಣ್ಣಿನ ವಿಧ, ವೈಜ್ಞಾನಿಕ ಹೆಸರುಗಳು ಮತ್ತು ಔಷಧೀಯ ಮೌಲ್ಯಗಳ ವಿವರವಾದ ದಾಖಲೆಗಳನ್ನು ತಿಳಿದು ಅದಕ್ಕೆ ತಕ್ಕಂತೆ ಹಣ್ಣಿನ ಕೃಷಿ ಕರ?ಯದಲ್ಲಿ ತೊಡಗಿದ್ದಾರೆ. ಅವರು ಸಂಗ್ರಹಿಸಿದ ಹಣ್ಣುಗಳನ್ನು ಜನರಿಗೆ ಪರಿಚಯಿಸಲು ಸ್ವಂತ ನರ್ಸರಿಯನ್ನೂ ನಡೆಸುತ್ತಿದ್ದಾರೆ.



25 ವಿಧದ ಚೆರ್ರಿ, 30 ವಿಧದ ಸೀತಾಫಲ ಮತ್ತು 30 ವಿಧದ ಗಾರ್ಸಿನಿಯಾ ಇತ್ಯಾದಿ ಹಣ್ಣುಗಳ ಹಲವು ವಿಧಗಳು, ಅನಾನಸ್, ಪೇರಳೆ, ಅಡಿಕೆ, ತೆಂಗಿನಕಾಯಿ, ನೀರು ಸೇಬು, ಮಾವು, ಹಲಸು, ನಿಂಬೆ ಮತ್ತು ಔಷಧೀಯ ಸಸ್ಯಗಳ ಸಂಗ್ರಹವನ್ನು ಫಾರ್ಮ್ ಹೌಸ್ ನಲ್ಲಿ ಹೊಂದಿದ್ದಾರೆ. ಕೆಲವು ತಳಿಗಳನ್ನು ಬೆಳೆಯುವುದು ದುಬಾರಿಯಾಗಿದ್ದರೂ ಆಸಕ್ತಿಯ ಕಾರಣದಿಂದ ಅವುಗಳನ್ನು ಬೆಳೆಯುತ್ತಿದ್ದಾರೆ.

## ಸನಾತನ ಮಾತ್ರವೇ ಧರ್ಮ, ಉಳಿದವೆಲ್ಲಾ ಪಂಥಗಳು: ಯೋಗಿ ಆದಿತ್ಯನಾಥ್

ಸನಾತನ ಧರ್ಮದ ಮಹತ್ವವನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಒತ್ತಿಹೇಳಿದ್ದು, ಸನಾತನ ಧರ್ಮ ಏಕೈಕ ಧರ್ಮವಾಗಿದೆ ಮತ್ತು ಉಳಿದೆಲ್ಲವೂ ಪಂಥಗಳು ಮತ್ತು ಪೂಜಾ ವಿಧಾನಗಳು ಎಂದು ಪ್ರತಿಪಾದಿಸಿದ್ದಾರೆ. ಗೋರಖನಾಥ ದೇವಾಲಯದಲ್ಲಿ ನಡೆದ ಶ್ರೀಮದ್ ಭಾಗವತ್ ಕಥಾಜ್ಞಾನ ಯಾಗದ ಸಮಾರೋಪ ಸಮಾರಂಭದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಸನಾತನ ಧರ್ಮ ಮಾನವೀಯತೆಯ ಧರ್ಮವಾಗಿದೆ ಮತ್ತು ಅದರ ಮೇಲಿನ ಯಾವುದೇ ದಾಳಿಯು ಇಡೀ ಮಾನವೀಯತೆಯನ್ನು ಅಪಾಯಕ್ಕೆ ತಳ್ಳುತ್ತದೆ ಎಂದು ಹೇಳಿದ್ದಾರೆ. ಶ್ರೀಮದ್ ಭಾಗವತ್ ಸಾರವನ್ನು ನಿಜವಾಗಿಯೂ ಗ್ರಹಿಸಲು ಮುಕ್ತ ಮನಸ್ಥಿತಿ ಹೊಂದಬೇಕಿದೆ. ಸಂಕುಚಿತ ಮನಸ್ಸಿನ ದೃಷ್ಟಿಕೋನಗಳು ಅದರ ಬೋಧನೆಗಳ ವಿಶಾಲತೆಯನ್ನು ಒಳಗೊಳ್ಳಲು ಹೆಣಗಾಡುತ್ತವೆ ಎಂದರು.

ಭಗವದ್ಗೀತೆ ಮನುಕುಲಕ್ಕೆ ದಾರಿದೀಪ. ಇದರಿಂದ ಮಾನವ ಸರಿಯಾದ ದಾರಿಯಲ್ಲಿ ಸಾಗಲು ಸಾಧ್ಯವಾಗುತ್ತದೆ. ಕೆಲವು ಕುತ್ಸಿತ ಹಾಗೂ ಸಂಕುಚಿತ ಮನಸ್ಸುಗಳು ಭಗವದ್ಗೀತೆಯ ಸಾರದ ಬಗ್ಗೆ ನಕಾರಾತ್ಮಕ ಮಾಹಿತಿ ಹರಡುತ್ತವೆ. ಆದರೆ, ಮನುಕುಲಕ್ಕೆ ಭಗವದ್ಗೀತೆ ದೊಡ್ಡ ದೀವಿಗೆಯಾಗಿದೆ ಎಂದರು.

ವಿಶ್ವ ಹಿಂದೂ ಪರಿಷದ್ ವತಿಯಿಂದ ಆಯೋಜಿಸಲಾದ ಶೌರ್ಯ ಜಾಗರಣ ರಥಯಾತ್ರೆಯು ಸೆಪ್ಟೆಂಬರ್ 25, 2023ರಂದು ಚಿತ್ರದುರ್ಗದಲ್ಲಿ ಉದ್ಘಾಟನೆಗೊಂಡಿತು. ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಮಾದಾರಚೆನ್ನಯ್ಯ ಸ್ವಾಮೀಜಿ, ಪೂಜ್ಯ ಶ್ರೀ ಸೇವಾಲಾಲ್ ಮಹಾಸ್ವಾಮಿಗಳು ಮತ್ತು ನಾಗಾಸಾಧುಗಳು ದಿವ್ಯಸಾನಿಧ್ಯ ವಹಿಸಿದ್ದರು. ರಾಜ್ಯಾದ್ಯಂತ ನಡೆದ ರಥಯಾತ್ರೆಯು ಹಿಂದೂ ಸಮಾಜವನ್ನು ಜಾಗೃತ ಗೊಳಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಅಕ್ಟೋಬರ್ 10, 2023ರಂದು ಉಡುಪಿಯಲ್ಲಿ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯಗೊಂಡಿತು.



पुंगव PUNGAVA

# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th OCTOBER 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-10-2023




## ಅಂಗದಾನ ಮಾಡುವವರು ಭಗವಂತನಿಗೆ ಸಮಾನ: ಡಾ. ಮೋಹನ್ ಭಾಗವತ್

ಸೂರತ್: ಅಂಗದಾನವು ದೇಶಭಕ್ತಿಯ ಕೆಲಸದ ಜೊತೆಗೆ ದೇಶಭಕ್ತಿಯ ಒಂದು ಸ್ವರೂಪವೇ ಆಗಿದೆ. ಮರಣದ ನಂತರ, ದೇಹವು ಯಾರಿಗಾದರೂ ಉಪಯೋಗವಾಗುತ್ತದೆ ಎಂದಾದರೆ ಅಂಗದಾನವನ್ನು ಮಾಡುವುದು ಮನುಷ್ಯ ಧರ್ಮ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದರು.

ಸೂರತ್‌ನ ಪಂಡಿತ್ ದೀನದಯಾಳ್ ಉಪಾಧ್ಯಾಯ ಒಳಾಂಗಣ ಕ್ರೀಡಾಂಗಣದಲ್ಲಿ ಡೊನೇಟ್ ಲೈಫ್ ಆಯೋಜಿಸಿದ್ದ ಅಂಗಾಂಗ ದಾನಿಗಳ ಕುಟುಂಬಗಳ ಸನ್ಮಾನ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಒಬ್ಬ ವ್ಯಕ್ತಿಯ ಒಂದು ಅಂಗವು ನಿಷ್ಪ್ರಯೋಜಕವಾಗಿರುವುದರಿಂದ ಅವರ ಜೀವನವು ಹಾಳಾಗುತ್ತದೆ. ಆದರೆ ನಾವು ಅದೇ ಅಂಗಾಂಗವನ್ನು ಹೊಂದಿದ್ದೇವೆ, ಅದನ್ನು ಬಳಸಿದ್ದೇವೆ ಮತ್ತು ಇನ್ನು ಮುಂದೆ ಬಳಸುವುದಿಲ್ಲ ಎಂದಾದರೆ ನಾವೇಕೆ ಅದನ್ನು ದಾನ ಮಾಡಬಾರದು? ಈ ದೇಶಕ್ಕಾಗಿ ಬದುಕುವುದು, ಈ ದೇಶಕ್ಕಾಗಿ ಸಾಯುವುದು, ಸತ್ತ ನಂತರವು ಕೆಲವು ಅಂಗಾಂಗಗಳು ಸ್ವಲ್ಪ ಸಮಯದವರೆಗೆ ಜೀವಂತವಾಗಿದ್ದರೆ, ಆ ಅಂಗಗಳನ್ನು ಇತರ ಜನರ ಬಳಕೆಗೆ ಲಭ್ಯವಾಗುವಂತೆ ಮಾಡುವುದು ನಮ್ಮ ಜವಾಬ್ದಾರಿ.

ತ್ಯಾಗದ ಪರಮ ಆದರ್ಶ ದಧೀಚಿ ಮುನಿಗಳು. ಅವರೇ ಮೊದಲ ಅಂಗಾಂಗ ದಾನಿಗಳು. ಈ ಕಾರ್ಯ ಪವಿತ್ರ ಕರ್ತವ್ಯವೂ ಹೌದು ಮತ್ತು ದೇಶಕಾರ್ಯವೂ ಹೌದು. ನಮ್ಮ ದೇಶದಲ್ಲಿ ಲಕ್ಷಾಂತರ ಜನರು ಅಂಗಾಂಗಗಳ ನಿರೀಕ್ಷೆಯಲ್ಲಿ ಕಾದು ಯಾತನೆಯನ್ನು ಅನುಭವಿಸುತ್ತಿದ್ದಾರೆ. ಈ ಚಿಕಿತ್ಸೆಗೆ ಖರ್ಚುಗಳಿವೆ. ಖರ್ಚು ಮಾಡಿದ ನಂತರ ವರ್ಷಗಟ್ಟಲೆ ವೇಯ್ಟಿಂಗ್ ಲಿಸ್ಟ್‌ನಲ್ಲಿ ಉಳಿಯಬೇಕು. ಸ್ವತಂತ್ರ ದೇಶದಲ್ಲಿ ಅಮೇರಿಕಾವಾಗಲಿ, ಇಂಗ್ಲೆಂಡ್ ಆಗಲಿ ನಮ್ಮ ಅಗತ್ಯಗಳನ್ನು





ಪೂರೈಸುವುದಲ್ಲ, ಅದನ್ನು ನಾವು ಮಾಡಬೇಕಾಗಿದೆ. ಈ ಹಾದಿಯಲ್ಲಿ ನಾವು ಒಂದೊಂದೇ ಹೆಜ್ಜೆ ಇಟ್ಟು ಮುಂದೆ ಸಾಗಿದ್ದೇವೆ.

ಕಾರ್ಯಕ್ರಮದಲ್ಲಿ ಅಂಗಾಂಗ ದಾನ ಮಾಡಿದ 63 ಕುಟುಂಬಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಮಾತೃಭೂಮಿಯ ಮಗನಾಗಿ ಒಬ್ಬರಿಗೊಬ್ಬರು ಸಂಪರ್ಕ ಹೊಂದುವ ಮೂಲಕ ಇತರರ ನೋವುಗಳನ್ನು ಅರಿತು ಅವರ ಸುಖ-ದುಃಖಗಳಲ್ಲಿ ಭಾಗಿಯಾಗುವ ವ್ಯಕ್ತಿಗಳೇ 'ಜನ' ಎನಿಸಿಕೊಳ್ಳುತ್ತಾರೆ. ಮನುಷ್ಯನು ನಾರಾಯಣನಾಗಬೇಕು. ದೈಹಿಕ, ಬೌದ್ಧಿಕ ಮತ್ತು ಮಾನಸಿಕವಾಗಿ ಸಬಲರಾಗಬೇಕು ಮತ್ತು ಸಮಾಜದ ರೂಪದಲ್ಲಿರುವ ದೇವರ ಪಾದಗಳಿಗೆ ಉತ್ತಮ ದಾನಗಳನ್ನು ನೀಡಬೇಕು. ಅಂಗಾಂಗ ದಾನವು ಒಂದು ಉದಾತ್ತ ಕಾರ್ಯವಾಗಿದ್ದು, ಸಮಾಜದೊಂದಿಗೆ ಒಟ್ಟಾಗಿ ಕೆಲಸ ಮಾಡಬೇಕಾದದ್ದು ಸಂಘದ ಅವಶ್ಯಕತೆಯಾಗಿದೆ.

## ಭಗವದ್ಗೀತೆ ಹಕ್ಕುಸ್ವಾಮ್ಯ ಯಾರಿಗೂ ಇಲ್ಲ: ದೆಹಲಿ ಹೈಕೋರ್ಟ್




ಭಗವದ್ಗೀತೆ ಮೇಲೆ ಯಾವುದೇ ಹಕ್ಕುಸ್ವಾಮ್ಯ ಇಲ್ಲ. ಅದನ್ನು ಆಧರಿಸಿದ ಕಾಲ್ಪನಿಕ ಕೃತಿಗಳು ಕೂಡಾ ಹಕ್ಕು ಸ್ವಾಮ್ಯ ಹೊಂದಿರುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರು ಸ್ಥಾಪಿಸಿದ ಭಕ್ತಿವೇದಾಂತ ಬುಕ್ ಟ್ರಸ್ಟ್‌ಗೆ ಸಂಬಂಧಿಸಿದ ಗ್ರಂಥಗಳನ್ನು ಆಧರಿಸಿ ಮರು ರಚನೆ ಮತ್ತು ಪ್ರಸಾರ ಮಾಡದಂತೆ ದೆಹಲಿ ಹೈಕೋರ್ಟ್ ಹಲವು ಸಂಸ್ಥೆಗಳನ್ನು ನಿರ್ಬಂಧಿಸಿದೆ. ಧಾರ್ಮಿಕ ಗ್ರಂಥಗಳಲ್ಲಿ ಹಕ್ಕುಸ್ವಾಮ್ಯ ಇರುವಂತಿಲ್ಲ. ಆದರೆ ರಮಾನಂದ ಸಾಗರ್ ಅವರ ರಾಮಾಯಣ ಮತ್ತು ಬಿ.ಆರ್.ಚೋಪ್ರಾ ಅವರ ಮಹಾಭಾರತ ಧಾರಾವಾಹಿಗಳಲ್ಲಿ ಬಳಸಿಕೊಂಡಂತೆ ಭಗವದ್ಗೀತೆಯ ಅಂಶಗಳನ್ನು ಅಳವಡಿಸಿಕೊಳ್ಳಬಹುದು ಎಂದು ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ಹೇಳಿದ್ದಾರೆ.

## ಬ್ರಿಟಿಷ್ ಆಳ್ವಿಕೆಯಿಂದ 40 ವರ್ಷದಲ್ಲಿ 16 ಕೋಟಿ ಭಾರತೀಯರ ಹತ್ಯೆ, 3600 ಲಕ್ಷ ಕೋಟಿ ಲೂಟಿ!

ಬ್ರಿಟನ್ನಿನ ಆಳ್ವಿಕೆಯ ಸಮಯದಲ್ಲಿ ಭಾರತ ಹೇಗೆ ನಲುಗಿತು ಎಂಬ ಬಗ್ಗೆ ಬ್ರಿಟಿಷರಿಂದಲೇ ಅಧ್ಯಯನ ವರದಿಯೊಂದು ಬಿಡುಗಡೆಯಾಗಿದ್ದು, ಆಘಾತಕಾರಿ ಮಾಹಿತಿಯೊಂದನ್ನು ಅದು ಹೊರಹಾಕಿದೆ. 89 ವರ್ಷಗಳ ಕಾಲ ಭಾರತದ ಮೇಲೆ ನೇರ ಆಳಿಕೆ ನಡೆಸಿದ ಬ್ರಿಟಿಷರು, ಕೇವಲ 40 ವರ್ಷಗಳ ಅವಧಿಯಲ್ಲೇ 16.5 ಕೋಟಿಗೂ ಅಧಿಕ ಮಂದಿ ಭಾರತೀಯರು ಮೃತಪಟ್ಟಿದ್ದಾರೆ. ಜೊತೆಗೆ ಈ ಅವಧಿಯಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಮೌಲ್ಯದ ಭಾರತೀಯ ಸಂಪತ್ತನ್ನು ಬ್ರಿಟಿಷರು ಲೂಟಿ ಮಾಡಿದ್ದಾರೆ.

ಬ್ರಿಟನ್‌ನ ಅರ್ಥಶಾಸ್ತ್ರಜ್ಞ ಮತ್ತು ಮಾನವಶಾಸ್ತ್ರಜ್ಞ ಜೇಸನ್ ಹಿಕೆಟ್ ಮತ್ತು ಅವರ ಸಹ ಸಂಶೋಧಕ ಡೈಲಾನ್ ಸಲ್ಲಿವನ್, 'ಕ್ಯಾಪಿಟಲಿಸಂ ಎಕ್ಸ್‌ಟ್ರೀಮ್ ಪಾವರ್ಟಿ: ಅ ಗ್ಲೋಬಲ್ ಅನಾಲಿಸಿಸ್' ಎಂಬ ಸಂಶೋಧನಾ ವರದಿಯನ್ನು ಪ್ರಕಟಿಸಿದ್ದು, ಇದರಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದಲ್ಲಿ ರೂಪಿಸಿದ ಕಾನೂನುಗಳು, ಜಾರಿಗೆ ತಂದ ನಿಯಮಗಳ ಕಾರಣ ಬಡತನ ಹೆಚ್ಚಳ, ದುಡಿಯುವ ಅವಕಾಶಗಳು ಇಳಿಕೆ, ಆಹಾರದ ಕೊರತೆ, ಅಪೌಷ್ಟಿಕತೆ, ಆರೋಗ್ಯ ಸೇವೆಗಳ ಕೊರತೆಯಿಂದ ಜೀವಿತಾವಧಿ ಭಾರಿ ಇಳಿಕೆಯಾಯಿತು. ಈ ಆಡಳಿತ ಕ್ರಮದಿಂದಾಗಿ 1880ರಿಂದ 1920ರವರೆಗೆ ಭಾರತದಲ್ಲಿ ಸುಮಾರು 16.5 ಕೋಟಿಗೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಇದು 2 ವಿಶ್ವ ಮಹಾಯುದ್ಧ ಹಿಟ್ಲರ್ ನಡೆಸಿದ ಮಾರಣಹೋಮದಲ್ಲಿ ಸಂಭವಿಸಿದ ಸಾವಿಗಿಂತ ಅಧಿಕವಾಗಿದೆ. ಅಲ್ಲದೇ 200 ವರ್ಷಗಳಲ್ಲಿ ಬ್ರಿಟಿಷರು ಭಾರತದಿಂದ ಸುಮಾರು 3600 ಲಕ್ಷ ಕೋಟಿ ರು. ಮೌಲ್ಯದ ಸಂಪತ್ತನ್ನು ಲೂಟಿ ಮಾಡಿದ್ದಾರೆ ಎಂದು ಹೇಳಿದ್ದಾರೆ.

## ಭಾರತೀಯ ಚಿಂತನೆಯ ಯುಗಾನುಕೂಲ ರೂಪವೇ ಏಕಾತ್ಮ ಮಾನವ ದರ್ಶನ: ಶಂಕರಾನಂದ

ಬೆಂಗಳೂರು: ದೀನದಯಾಳ್ ಉಪಾಧ್ಯಾಯರೇ ಸ್ವತಃ ಹೇಳುವಂತೆ ಅವರ ಏಕಾತ್ಮ ಮಾನವ ದರ್ಶನದ ಚಿಂತನೆಗಳು ಈ ರಾಷ್ಟ್ರಕ್ಕೆ ಹೊಸತೇನಲ್ಲ. ಆದರೆ ಭಾರತೀಯ ಚಿಂತನೆಗಳು ನೀತಿಯಲ್ಲಿ ಬರಬೇಕು. ನೀತಿಗೆ ಸಂಬಂಧಪಟ್ಟಂತೆ ಸಂರಚನೆ ರೂಪಿತವಾಗಬೇಕು. ಸಂರಚನೆಗೆ ತಕ್ಕಂತೆ ಸಮಾಜದಲ್ಲಿ ವ್ಯಾವಹಾರಿಕ ಬದಲಾವಣೆಯಾಗಬೇಕು ಎನ್ನುವುದು ಅವರ ಧ್ಯೇಯವಾಗಿತ್ತು ಎಂದು ಭಾರತೀಯ ಶಿಕ್ಷಣ ಮಂಡಳಿಯ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿ ಶಂಕರಾನಂದ ಬಿ. ಆರ್. ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಗಳೂರು ಮಹಾನಗರದ ವತಿಯಿಂದ ಬೆಂಗಳೂರಿನ ಜೆ.ಪಿ.ನಗರದ ಆರ್.ವಿ.ಡೆಂಟಲ್ ಕಾಲೇಜಿನಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ 107ನೇ ಜಯಂತಿಯ ಪ್ರಯುಕ್ತ ನಡೆದ ಸಂಸ್ಮರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಮಾನ್ಯ ಬಡಕುಟುಂಬದಲ್ಲಿ ಜನಸಿದ ದೀನದಯಾಳ್ ಉಪಾಧ್ಯಾಯ ಎಂಬ ಹುಡುಗ ಅಸಮಾನ್ಯ ವ್ಯಕ್ತಿಯಾಗಿ ಬೆಳೆದಿದ್ದೇಗೆ ಎಂಬ ಪ್ರಶ್ನೆ ನಮ್ಮನ್ನು ಚಿಂತನೆಗೆ ಎಡೆಮಾಡಿಕೊಡುತ್ತದೆ. ಭಗವಂತನು ಪ್ರತಿಯೊಬ್ಬನಲ್ಲೂ ಅದ್ವಿತೀಯತೆಯನ್ನು ಕೊಟ್ಟಿರುತ್ತಾನೆ. ಅದನ್ನು ಪ್ರಕಟೀಕರಣಗೊಳಿಸುವುದಕ್ಕೆ ಭಗವಂತನು ಎಲ್ಲರಿಗೂ ನೀಡಿರುವ ಅಸೀಮಾ ಶಕ್ತಿಯನ್ನು ಬಳಸಿಕೊಂಡಾಗ ನಮ್ಮ ಜೀವನ ಸಾರ್ಥಕವಾಗತ್ತದೆ. ಎದುರಾಗುವ ಎಲ್ಲಾ ಕಷ್ಟ, ನಷ್ಟ, ನೋವುಗಳನ್ನು ನಗುತ್ತಾ ಸ್ವೀಕರಿಸಿದಾಗ ಸಮಷ್ಟಿ ಹಿತ ಸಾಧ್ಯವಾಗುತ್ತದೆ.

ಭಗವಂತನು ಕರ್ಮ ಸ್ವಾತಂತ್ರ್ಯ ಮತ್ತು ಕಲ್ಪನಾ ಸ್ವಾತಂತ್ರ್ಯ ಎಂಬ ಎರಡು ರೀತಿಯ ಶಕ್ತಿಯನ್ನು ನಮಗೆ ನೀಡಿದ್ದಾನೆ.ಎರಡೂ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡಾಗ ಮನುಷ್ಯ ವ್ಯಷ್ಟಿಯಿಂದ ಸಮಷ್ಟಿಯೆಡೆಗೆ, ಸಮಷ್ಟಿಯಿಂದ ಸೃಷ್ಟಿಯೆಡೆಗೆ, ಸೃಷ್ಟಿಯಿಂದ ಪರಮೇಷ್ಟಿಯೆಡೆಗೆ ಹೋಗುತ್ತಾನೆ ಎಂದರು.




ಭಾರತೀಯ ಚಿಂತನೆಯ ಯುಗಾನುಕೂಲ ರೂಪವೇ ಏಕಾತ್ಮ ಮಾನವ ದರ್ಶನ ಎಂದು ದೀನದಯಾಳ್ ಉಪಾಧ್ಯಾಯ ಅವರೇ ಸ್ವತಃ ತಿಳಿಸಿದ್ದಾರೆ. ಭಾರತ ನಿಜವಾಗಿಯೂ ಸ್ವಾತಂತ್ರ್ಯವಾಗಬೇಕಾದರೆ ಏಕಾತ್ಮ ಮಾನವ ದರ್ಶನ ಭಾರತದ ಜನಮಾನಸದಿಂದ ಪ್ರಕಟವಾಗಬೇಕು. ಭಾರತೀಯ ಚಿಂತನೆಗಳು ಸಾಮೂಹಿಕವಾಗಿ ಸಮಾಜದ ಜನರ ಬದುಕಿನಲ್ಲಿ ಪರಿವರ್ತನೆ ತರಬೇಕಾದರೆ ಹತ್ತಿರದ ಆದರ್ಶಗಳನ್ನು ಜನರ ಮುಂದಿಡಬೇಕು. ಸಮಾಜಕ್ಕಾಗಿ ತನ್ನನ್ನು ಸಮರ್ಪಿಸಿಕೊಳ್ಳುವ ವ್ಯಕ್ತಿಗಳನ್ನು ನಿರ್ಮಿಸಬೇಕು. ಅಂತಹ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾಡುತ್ತಿದೆ. ದೀನದಯಾಳರ ಚಿಂತನೆಗಳು ನೀತಿಯಲ್ಲಿ ಬರಬೇಕು. ನೀತಿಗಳು ವ್ಯವಸ್ಥೆಯಲ್ಲಿ ಬರದೆ ಇದ್ದರೆ ಪರಿವರ್ತನೆ ತರುವುದು ಕಷ್ಟ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಆಗುವುದು ಪ್ರತಿಯೊಬ್ಬರು ಈ ನೆಲೆಗಟ್ಟಿನಲ್ಲಿ ಕೆಲಸ ಮಾಡಿದಾಗ ಮಾತ್ರ ಎಂದು ಅಭಿಪ್ರಾಯಪಟ್ಟರು.

## ರಾಮಸೇತುಗೆ ರಾಷ್ಟ್ರೀಯ ಸ್ಥಾನಮಾನ ಕೋರಿದ್ದ ಅರ್ಜಿ ವಜಾ

ರಾಮಸೇತುವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಣೆ ಮಾಡಬೇಕು ಮತ್ತು ಈ ಸ್ಥಳದಲ್ಲಿ ಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಹಿಂದೂ ವೈಯಕ್ತಿಕ ಕಾನೂನು ಸಂಸ್ಥೆ ಸಲ್ಲಿಸಿದ್ದ ಈ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, 'ಇದು ಆಡಳಿತಕ್ಕೆ ಸಂಬಂಧಿಸಿದ ವಿಚಾರ. ನಾವೇಕೆ ಇದರಲ್ಲಿ ಮಧ್ಯ ಪ್ರವೇಶಿಸಬೇಕು' ಎಂದು ಹೇಳಿ ಅರ್ಜಿಯನ್ನು ವಜಾಗೊಳಿಸಿತು.


ಓದುಗರೇ ಗಮನಿಸಿ

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.